

ಕಳೆದ ಜುಲೈ ತಿಂಗಳು ಪ್ಯಾರಿಸ್ ನಗರವನ್ನು ನೋಡಹೊರಟವರಿಗೆ ಕಂಡಿದ್ದೇ ಬೇರೆ. ಪ್ಯಾರಿಸ್‌ಗೆ ಹೋಗಿ ಐಫೆಲ್ ಟವರ್ ನೋಡದೆ ಬರುವುದುಂಟೆ? ಐಫೆಲ್ ಟವರ್ ಸುತ್ತಮುತ್ತ ಎಲ್ಲಿ ನೋಡಿದರೂ ನೀರಿನ ಕಾರಂಜಿ. ಕಾಮನಬಿಲ್ಲಿನಂತೆ ಬಾಗಿದ ಈ ನೀರಿನ ಜೆಟ್‌ಗೆ ಎಲ್ಲರೂ ಮೈಯೊಡ್ಡಿದರು.

ಹತ್ತಿರದ ಟೊಕಾಡಿಯೋ ಎಂಬಲ್ಲಿದ್ದ ಕೊಳದಿಂದ ನೇರ ನೀರು ಹರಿಸಿ ಇಲ್ಲಿ ಎಲ್ಲರಿಗೂ ಷವರ್. ಇದೇನೂ ಪ್ರವಾಸಿಗಳಿಗೆ ವಿನೋದ ಕೊಡುವ ಕಾರ್ಯವಾಗಿರಲಿಲ್ಲ. ರಮ್ಯ ದೃಶ್ಯವಾಗಿತ್ತು ನಿಜ. ಆದರೆ ಪ್ರವಾಸಿಗರಿಗೂ ದಿಗಿಲು, ಸ್ಥಳೀಯರಿಗೂ ಅನಿರೀಕ್ಷಿತ ಸ್ಥಿತಿ. ಮೀಟಿಯಾ ಫ್ರಾನ್ಸ್ ಹವಾಮಾನ ಇಲಾಖೆ ಗಂಟೆಗಂಟೆಗೂ ಪ್ಯಾರಿಸ್ ನಗರದ ಉಷ್ಣತೆ ಎಷ್ಟಿದೆ ಎಂದು ವರದಿ ಮಾಡುತ್ತಲೇ ಇತ್ತು. ಜುಲೈ ತಿಂಗಳ 25, ಸಂಜೆ 4.30ರಲ್ಲಿ ಪ್ಯಾರಿಸ್ ಅನುಭವಿಸಿದ ಉಷ್ಣತೆ 42.6 ಡಿಗ್ರಿ ಸೆ. 1947ರಲ್ಲಿ ಉಷ್ಣತೆ 40 ಡಿಗ್ರಿ ಸೆ.ಗೆ ತಲುಪಿತ್ತು. ಈ ಬಾರಿ ಆ ದಾಖಲೆಯನ್ನೂ ಮುರಿಯಿತು.

ಎಂದಾದರೂ ಪ್ಯಾರಿಸ್ ನಮ್ಮ ಬಳ್ಳಾರಿ, ಗುಲಬರ್ಗಾವನ್ನು ಬಿಸಿಲಿನಲ್ಲಿ ಸರಿಗಟ್ಟಿತ್ತೆ? ಅದೂ ಹಿಮಾಚ್ಛಾದಿತ ಯೂರೋಪಿನಲ್ಲಿ ಬಿರುಬೇಸಗೆಯ ಪರಾಕಾಷ್ಠೆ ಎಂದರೆ? ಪ್ಯಾರಿಸ್ಸಿನಲ್ಲೇ ನೆಲೆಸಿರುವವರ ಪಾಡು? 'ಏರ್‌ಕಂಡೀಷನರ್ ಎಲ್ಲಿ ತರೋಣ, ನಾವು ಶ್ರೀಮಂತರಲ್ಲ' ಎಂದರು ತುಂತುರು ನೀರಿಗೆ ಮೈತೆತ್ತವರು. ಪ್ಯಾರಿಸ್ ಹೀಗಾಗುತ್ತದೆಂದು ನಮ್ಮ ಹಿಂದಿನ ತಲೆಮಾರಿನ ಯಾರೂ ಊಹಿಸಿರಲಿಲ್ಲ ಎಂಬ ಮಾತು ಅವರ ಬಾಯಿಂದ ಬರುತ್ತಿತ್ತು. ಹವಾಮಾನ ಕುರಿತ ವರದಿಗೆ ಪ್ಯಾರಿಸ್ಸಿನ ಜನ ಭಯದಿಂದಲೇ ಕಿವಿಕೊಡುತ್ತಿದ್ದರು. ನಗರದಲ್ಲಿ ಅಲ್ಲಲ್ಲಿ ಇಂಥ 'ಜೆಟ್ ಪಾಯಿಂಟ್' ಏರ್ಪಡಿಸಲಾಗಿತ್ತು.

ಇದು ಪ್ಯಾರಿಸ್ ನಗರವೊಂದರ ಕಥೆಯಲ್ಲ. ಜುಲೈ ತಿಂಗಳು ಇಡೀ ಯೂರೋಪನ್ನು ಅಗ್ನಿಕುಂಡಕ್ಕೆ ಹಾಕಿದ ತಿಂಗಳು. ನೆದರ್‌ಲೆಂಡ್ ಎಂಡೋವೆನ್ ನಗರದಲ್ಲಿಯೂ ಫೌಂಟೆನ್‌ಗಳ ಸುತ್ತ ಗಂಟೆಗಟ್ಟಲೆ ಜನ ಜಮಾಯಿಸಿ ಮೈಯನ್ನು ತಣ್ಣಗೆ ಮಾಡಿಕೊಂಡರು. ಯಾರನ್ನು ಗಮನಿಸಿದರೂ ಒಂದು ಕೈಯಲ್ಲಿ ನೀರಿನ ಬಾಟಲು, ಮತ್ತೊಂದು ಕೈಯಲ್ಲಿ ಬೀರ್ ಬಾಟಲು. ನೆದರ್‌ಲೆಂಡ್ ಇತಿಹಾಸದಲ್ಲಿ ಎಂದೂ ಈ ಮಟ್ಟದ ಉಷ್ಣತೆ ಏರಿರಲಿಲ್ಲ. ಜುಲೈ ತಿಂಗಳಲ್ಲಿ ಅಲ್ಲೂ 40.4 ಡಿಗ್ರಿ ಸೆ. ಏರಿತ್ತು.

ಮಹಾಕವಿ ಷೇಕ್ಸ್‌ಪಿಯರ್ ತನ್ನ 18ನೇ ಸಾನೆಟ್ಟಿನಲ್ಲಿ 'ಷಲ್ ಐ ಕಂಪೇರ್ ದೀ ಟು ಎ ಸಮ್ಮರ್ಸ್ ಡೇ' ಎಂದಿದ್ದಾನೆ. ಸದಾ ಥಂಡಿಯಲ್ಲಿರುವ ಇಂಗ್ಲೆಂಡಿನಲ್ಲಿ ಬೇಸಗೆ ಆಹ್ಲಾದಕರ ಎಂಬ ಒಳಾರ್ಥ ಈ ಮಾತಿನದು. ಅದು ಹಳೆಯ ಕಾಲ. ಆದರೆ ಇಂದಿನ ಸ್ಥಿತಿಯಲ್ಲಿ ಸೂರ್ಯನಿಗೆ ಮೈಯೊಡ್ಡಿ ಕಿರಣಗಳ ಸ್ಪರ್ಶಕ್ಕೆ ಪುಲಕಗೊಳ್ಳುವುದು